2020 ಕ.ತೀ.ವ 910

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

## ಶ್ರೀ ಫೈಜ಼ಲ್ ಅಹಮದ್ ಖಾನ್ –ವಿರುದ್ಧ– ರಾಜ್ಯ ಸರ್ಕಾರ, ಮಹಿಳಾ ಪೋಲೀಸ್ ಠಾಣೆ, ಮೈಸೂರು*

ದಂಡ ಪ್ರಕ್ರಿಯಾ ಸಂಹಿತೆ 482ನೇ ಪ್ರಕರಣದಡಿಯಲ್ಲಿ ಕ್ರಿಮಿನಲ್ ಅರ್ಜಿ.

ಎರಡನೇ ಎದುರುದಾರರು ಅರ್ಜಿದಾರರ ಹೆಂಡತಿಯಾಗಿದ್ದು, ಎದುರುದಾರರು, ಅರ್ಜಿದಾರರ ವಿರುದ್ಧ ಭಾರತ ದಂಡ ಸಂಹಿತೆಯ 498–ಎ, 506 ಪ್ರಕರಣ ಮತ್ತು ವಧು–ವರದಕ್ಷಿಣೆ ನಿಷೇಧ ಅಧಿನಿಯಮ, 3 ಹಾಗೂ 4ನೇ ಪ್ರಕರಣದ ಅಡಿಯಲ್ಲಿ ಹೂಡಿದ ಫಿರ್ಯಾದನ್ನಾಧರಿಸಿ ಮೊದಲನೇ ಎದುರುದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ಹೂಡಿದ ಪ್ರಕರಣದ ನಡವಳಿಗಳನ್ನು ಕೈ ಬಿಡುವಂತೆ ಕೋರಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಅರ್ಜಿ.

**ಎರಡನೇ ಎದುರುದಾರರು ಅರ್ಜಿದಾರರೊಂದಿಗೆ ವಿವಾಹವಾದ ನಂತರ ತಮ್ಮ ಹಿಂದೆ ವಿವಾಹಿತ ಪತಿ ಹೂಡಿದ್ದ ದಾವೆಯನ್ನು ಎದುರಿಸುತ್ತಿರುತ್ತಾರೆ ಮತ್ತು ಅರ್ಜಿದಾರರೊಂದಿಗೆ ಆಗಸ್ಟ್ 2011ರಲ್ಲೇ ಅರ್ಜಿದಾರರೊಂದಿಗೆ ವೈವಾಹಿಕ ಸಂಬಂಧ ಕೊನೆಗೊಂಡಿರುತ್ತದೆ. ಎರಡನೇ ಎದುರುದಾರರು ಮೂರನೇ ವಿವಾಹವನ್ನು ಮಾಡಿಕೊಂಡಿದ್ದು ಮಗುವನ್ನೂ ಸಹ ಹೊಂದಿರುವುದಾಗಿ ನ್ಯಾಯಾಲಯದ ನಿರ್ಣಯವಿರುತ್ತದೆ. ಎರಡನೇ ಎದುರುದಾರರು ಹೂಡಿದ ಫಿರ್ಯಾದು ನಂಬಲಸಾಧ್ಯವಾದದ್ದು ಮತ್ತು ವ್ಯತಿರಿಕ್ತವಾದ ಆರೋಪಗಳನ್ನು ಹೊಂದಿರುತ್ತದೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿದೆ.**

*ಕ್ರಿಮಿನಲ್ ಅರ್ಜಿ ಸಂಖ್ಯೆ: 7129/2018, ದಿನಾಂಕ 11ನೇ ಅಕ್ಟೋಬರ್, 2019.

ಅಪೀಲುದಾರರ ಪರ : ಶ್ರೀ ಫೈಜ಼ಲ್ ಅಹಮದ್ ಖಾನ್ (ಖುದ್ದಾಗಿ ಹಾಜರಾಗಿರುತ್ತಾರೆ), ವಕೀಲರು.

1ನೇ ಪ್ರತ್ಯಪೀಲುದಾರರ ಪರ : ಶ್ರೀ ಎಸ್. ರಾಚಯ್ಯ, ಉಚ್ಚ ನ್ಯಾಯಾಲಯದ ಹೆಚ್ಚುವರಿ ವಾದಿಗಳು;

2ನೇ ಪ್ರತ್ಯಪೀಲುದಾರರ ಪರ : ಶ್ರೀ ಎಸ್.ಆರ್. ಹೆಗಡೆ, ಹುದ್ಲಮನೆ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್:**

ಇದೊಂದು ಕಾನೂನು ಪ್ರಕ್ರಿಯೆಯ ದುರುಪಯೋಗದಿಂದಾಗಿ ಅತ್ಯಂತ ಹೆಚ್ಚು ಕಿರುಕುಳಕ್ಕೊಳಗಾದ ಪತಿಯೊಬ್ಬನ ದುರಾದೃಷ್ಟದ ಪ್ರಕರಣವಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ಈ ಅರ್ಜಿಯನ್ನು ಈ ಮುಂದಿನ ನಿವೇದನೆಗಳೊಂದಿಗೆ ಸಲ್ಲಿಸಲಾಗಿರುತ್ತದೆ.

> ‘‘ಎ) ಮೈಸೂರಿನ IVನೇ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.ಯವರ ಕಡತದ ಮೇಲೆ ಇತ್ಯರ್ಥದಲ್ಲಿರುವ ಸಿ.ಸಿ.ಸಂಖ್ಯೆ: 923/2012 (ಮೈಸೂರಿನ ಮಹಿಳಾ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 22/2012ರಲ್ಲಿನ) ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಪ್ರಕರಣವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವುದನ್ನು ತಳ್ಳಿಹಾಕಿ ಮೈಸೂರಿನ IVನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.ಯ ಕಡತದ ಮೇಲೆ ಇತ್ಯರ್ಥದಲ್ಲಿರುವ ಸಿ.ಸಿ.ಸಂಖ್ಯೆ:923/2012ರಲ್ಲಿನ ಒಟ್ಟಾರೆ ನಡಾವಳಿಯನ್ನು ರದ್ದುಪಡಿಸುವಂತೆ ಕೋರಲಾಗಿರುತ್ತದೆ.
>
> ಬಿ) ನ್ಯಾಯ ನೀಡಿಕೆಯಲ್ಲಿ ಮೇಲೆ ಹೇಳಲಾದ ಕಾರಣಗಳಿಗಾಗಿ ಅರ್ಜಿದಾರರು ಸಲ್ಲಿಸಿದ ವಾದಕಾಲೀನ ಅರ್ಜಿಯ ಮೇಲೆ ಸಿ.ಸಿ.ಸಂಖ್ಯೆ:

923/2012ರಲ್ಲಿ ಮೈಸೂರಿನ IVನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.ರವರು ನೀಡಿದ ದಿನಾಂಕ: 10.8.2018ರ ಆದೇಶವನ್ನು ರದ್ದುಪಡಿಸಲು ಕೋರಲಾಗಿರುತ್ತದೆ."

2. ಅಹವಾಲನ್ನು ಸಲ್ಲಿಸಲು ಖುದ್ದಾಗಿ ಹಾಜರಾದ ಶ್ರೀ ಫೈಜಲ್ ಅಹಮದ್ ಖಾನ್, ಸರ್ಕಾರದ ಪರ ಮಾನ್ಯ ಎಚ್‌ಸಿಜಿಪಿ ***ಶ್ರೀಮತಿ ಕೆ.ಪಿ. ಯಶೋಧಾ*** ಹಾಗೂ ದೂರುದಾರ – ಎರಡನೇ ಪ್ರತ್ಯರ್ಜಿದಾರರ ಪರ ಶ್ರೀ ಎಸ್.ಆರ್. ಹೆಗಡೆ ಹುಡ್ಲಮನೆಯವರುಗಳ ವಾದವನ್ನು ಆಲಿಸಿರುತ್ತೇವೆ.

3. ಪ್ರಕರಣದ ಸಂಕ್ಷಿಪ್ತ ವಿಷಯವೆಂದರೆ, ಅರ್ಜಿದಾರನು ಸಂಯುಕ್ತ ಅರಬ್ ರಾಷ್ಟ್ರಗಳಲ್ಲಿನ ಕುವೈತ್‌ನಲ್ಲಿ ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿರುತ್ತಾನೆ. ಇವನು ದೂರುದಾರಳನ್ನು ಮೈಸೂರಿನಲ್ಲಿ 21ನೇ ಜುಲೈ 2008ರಂದು ವಿವಾಹವಾಗಿರುತ್ತಾನೆ. ಅವರಿಗೆ 29ನೇ ಏಪ್ರಿಲ್ 2009ರಂದು ಒಂದು ಹೆಣ್ಣುಮಗು ಜನಿಸಿರುತ್ತದೆ. ಇವರ ಪತ್ನಿ ನಾಜಿಯ ಆಸ್ಮಾ (ದೂರುದಾರಳು) ವಿದೇಶಕ್ಕೆ ಹೋಗಿ ಅರ್ಜಿದಾರನೊಂದಿಗಿರಲು ಒಪ್ಪಿಕೊಂಡಿರುವುದಿಲ್ಲ. ವಿವಾಹದ ಊರ್ಜಿತಕ್ಕಾಗಿ ಆತ ತನ್ನ ಕೆಲಸಕ್ಕೆ ರಾಜೀನಾಮೆ ನೀಡಿರುತ್ತಾನೆ. ಸೆಪ್ಟೆಂಬರ್ 2011ರಲ್ಲಿ ದೂರುದಾರಳು ತನ್ನ ಸಹೋದರಿಯ ನಿಶ್ಚಿತಾರ್ಥ ಸಮಾರಂಭದಲ್ಲಿ ಭಾಗವಹಿಸುವ ನೆಪದಿಂದ ತನ್ನೊಂದಿಗೆ ತನ್ನ ಬಟ್ಟೆಗಳು ಹಾಗೂ ಒಡವೆಗಳನ್ನು ತೆಗೆದುಕೊಂಡು ತನ್ನ ಪತಿಯ ಮನೆಯನ್ನು ತೊರೆದು ಹೋಗಿರುತ್ತಾಳೆ. ಆ ತರುವಾಯ, ಆಕೆ ತನ್ನ ಪತಿಯ ಮನೆಗೆ ಹಿಂದಿರುಗಿರುವುದೇ ಇಲ್ಲ. ತರುವಾಯ, ಅರ್ಜಿದಾರನಿಗೆ ಬೆಹ್ರೇನ್‌ನಲ್ಲಿ ಮತ್ತೊಂದು ಕೆಲಸ ದೊರೆಯುತ್ತದೆ. ದೂರುದಾರಳು ವಿದೇಶಕ್ಕೆ ಹೋಗಿ ತನ್ನ ಗಂಡನೊಂದಿಗೆ ಇರಲು ನಿರಾಕರಿಸಿರುತ್ತಾಳೆ. ಹಾಗಾಗಿ ಅರ್ಜಿದಾರನು 5ನೇ ಫೆಬ್ರವರಿ 2012ರಂದು ಒಬ್ಬನೇ ಬೆಹ್ರೇನ್‌ಗೆ ತೆರಳಿರುತ್ತಾನೆ.

4. 7ನೇ ಏಪ್ರಿಲ್ 2012ರಂದು ದೂರುದಾರಳು ಮೈಸೂರು ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಆರು ಜನ ಆಪಾದಿತರ ವಿರುದ್ಧ ವರದಕ್ಷಿಣೆಗಾಗಿ ಕಿರಿಕುಳ

ನೀಡುತ್ತಿದ್ದರೆಂದು ಆಪಾದಿಸಿ ಪ್ರಥಮ ಮಾಹಿತಿ ವರದಿ ಸಂಖ್ಯೆ: 22/2012ನ್ನು ಸಲ್ಲಿಸಿರುತ್ತಾಳೆ. ಅದರಲ್ಲಿ ಅರ್ಜಿದಾರನನ್ನು ಮೊದಲ ಆಪಾದಿತನಾಗಿಯೂ, ಆತನ ಕುಟುಂಬದ ಸದಸ್ಯರನ್ನು ಇತರೆ ಆಪಾದಿತರಂತೆಯೂ ತೋರಿಸಲಾಗಿರುತ್ತದೆ. ತನಿಖೆಯ ತರುವಾಯ, ಭಾರತ ದಂಡ ಸಂಹಿತೆಯ 498–ಇ ಹಾಗೂ 506ನೇ ಪ್ರಕರಣಗಳಡಿಯಲ್ಲಿ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮದ 3 ಹಾಗೂ 4ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಅರ್ಜಿದಾರರ ವಿರುದ್ಧ ಮಾತ್ರ ಪೊಲೀಸರು ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5. ಅರ್ಜಿದಾರನು, ಇವುಗಳಿಂದ ಖುಲಾಸೆ ಮಾಡುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. 10ನೇ ಆಗಸ್ಟ್ 2018ರ ಆದೇಶದ ಮೂಲಕ ಮಾನ್ಯ ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಸದರಿ ಅರ್ಜಿಯನ್ನು ವಜಾಗೊಳಿಸಿರುತ್ತಾರೆ. ಅರ್ಜಿದಾರನು, ಈ ಅರ್ಜಿಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ತನ್ನ ಅರ್ಜಿ ಮೇಲೆ ಮಾನ್ಯ ಸೆಷೆನ್ಸ್ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಒಳಗೊಂಡಂತೆ ಇಡೀ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಶ್ನಿಸಿರುತ್ತಾನೆ.

6. ಶ್ರೀ ಫಯಾಜ್ ಅಹ್ಮದ್ ಖಾನ್, ಅರ್ಜಿದಾರ/ಖುದ್ದಾಗಿ ತನ್ನ ಅರ್ಜಿಗೆ ಪೂರಕವಾಗಿ ಈ ಮುಂದಿನ ಆಧಾರಗಳನ್ನು ಇಟ್ಟುಕೊಂಡು ವಾದಿಸಿರುತ್ತಾನೆ.

- ದೂರುದಾರಳು 21ನೇ ಜುಲೈ 2008ರಂದು ಈತನನ್ನು ವಿವಾಹ ಮಾಡಿಕೊಳ್ಳುವುದಕ್ಕೆ ಮೊದಲು 29ನೇ ಆಗಸ್ಟ್ 2003ರಂದು ಆಸಿಫ್ ಆಲಿ ಫಾರೂಕ್ ಎಂಬುವನೊಂದಿಗೆ ವಿವಾಹವಾಗಿದ್ದಳು.

- ಆಸೀಫ್ ಆಲಿ ಫಾರೂಕ್ ದಾಂಪತ್ಯ ಹಕ್ಕುಗಳ ಪೂರ್ವ ಸ್ಥಿತಿ ವ್ಯಾಪ್ತಿಯನ್ನು ಕೋರಿ ಬೆಂಗಳೂರಿನ ಪ್ರಧಾನ ಕೌಟುಂಬಿಕ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಎಂ.ಸಿ.ಸಂಖ್ಯೆ: 1710/2006ನ್ನು ಸಲ್ಲಿಸಿರುತ್ತಾನೆ. ಇದು ಮೈಸೂರಿನ ಕೌಟುಂಬಿಕ

ನ್ಯಾಯಾಲಯಕ್ಕೆ ವರ್ಗಾವಣೆಗೊಂಡು, ಎಂ.ಸಿ.ಸಂಖ್ಯೆ: 244/2007 ಎಂಬ ಮರು ಸಂಖ್ಯೆಯನ್ನು ಪಡೆದಿರುತ್ತದೆ.

- ದೂರುದಾರಳು ಮರು ವಿವಾಹವಾಗಿರುವುದರ ವಿರುದ್ಧ ಎಂ.ಸಿ.ಸಂಖ್ಯೆ: 244/2007ರಲ್ಲಿ 5ನೇ ಆಗಸ್ಟ್ 2006ರಂದು ಮಧ್ಯಂತರ ಆದೇಶವನ್ನು ಹೊರಡಿಸಲಾಗಿರುತ್ತದೆ. ಆದಾಗ್ಯೂ, ದೂರುದಾರಳು ಈ ವಿಷಯವನ್ನು ಮರೆಮಾಚಿ ಮತ್ತು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಜುಲೈ 2008ರಲ್ಲಿ ಅರ್ಜಿದಾರನೊಂದಿಗೆ ವಿವಾಹವಾಗಿರುತ್ತಾಳೆ.

- ದೂರುದಾರಳೂ ಸಹ ಮೈಸೂರಿನ ಪ್ರಧಾನ 1ನೇ ಸಿವಿಲ್ ನ್ಯಾಯಾಧೀಶ ಹಾಗೂ ಜೆ.ಎಂ.ಎಫ್.ಸಿ.ಯ ಕಡತದ ಮೇಲೆ ಸಿ.ಎಂ.ಐ.ಎಸ್. ಸಂಖ್ಯೆ: 69/2012 ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಅಧಿನಿಯಮ, 2005ರ 12, 18, 19, 20, 21 ಹಾಗೂ 22ನೇ ಪ್ರಕರಣಗಳಡಿಯಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿರುತ್ತಾಳೆ. ಮಾನ್ಯ ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು 5ನೇ ಡಿಸೆಂಬರ್ 2016ರ ಆದೇಶದ ಪ್ಯಾರಾ ಸಂಖ್ಯೆ: 38 ಹಾಗೂ 39ರಲ್ಲಿ ನಿಶಾನೆ. ಆರ್.7 ದೂರುದಾರಳು ಮೂರನೇ ಭಾರಿ ವಿವಾಹವಾಗಿರುವುದನ್ನು ರುಜುವಾತುಪಡಿಸುತ್ತದೆಂದು ದಾಖಲಿಸಿ ವೆಚ್ಚಗಳೊಂದಿಗೆ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ.

- ದೂರುದಾರಳೂ ಸಹ ಜೀವನಾಂಶ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿ ಸಿ.ಎಂಐಎಸ್.ಸಂ.:526/2014ರಲ್ಲಿ ನಡಾವಳಿಗಳನ್ನು ಆರಂಭಿಸಿರುತ್ತಾಳೆ. ಸದರಿ ನಡಾವಳಿಯಲ್ಲಿ ತನ್ನ ಸಾಕ್ಷ್ಯವನ್ನು ನೀಡುವಾಗ, ಈ ಮುಂದೆ ತನಗೆ ವಿವಾಹವಾಗಿದ್ದುದನ್ನು ಹಾಗೂ ತನ್ನ ವಿವಾಹವು ಚನ್ನಪಟ್ಟಣದ ಉಪ-ನೋಂದಣಿ ಕಚೇರಿಯಲ್ಲಿ ನೋಂದಣಿ ಯಾಗಿರುವುದನ್ನು ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾಳೆ.

- ಅರ್ಜಿದಾರನು, ದೂರುದಾರಳೊಂದಿಗಿನ ತನ್ನ ವಿವಾಹವನ್ನು ಅನೂರ್ಜಿತ ಹಾಗೂ ಶೂನ್ಯವೆಂದು ಘೋಷಿಸುವಂತೆ ಕೋರಿ ಮೈಸೂರಿನ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರ ಕಡತದ ಮೇಲೆ ಮೂಲ ದಾವೆ ಸಂಖ್ಯೆ: 55/2015ನ್ನು ಸಲ್ಲಿಸಿರುತ್ತಾನೆ. 6ನೇ ಅಕ್ಟೋಬರ್ 2018ರ ತೀರ್ಪು ಹಾಗೂ ಡಿಕ್ರಿಯ ಮೂಲಕ, ಕೌಟುಂಬಿಕ ನ್ಯಾಯಾಲಯವು ದೂರುದಾರಳೊಂದಿಗಿನ ಅರ್ಜಿದಾರನ ವಿವಾಹವನ್ನು ಅನೂರ್ಜಿತ ಹಾಗೂ ಶೂನ್ಯವಾಗಿರುವುದೆಂದು ಘೋಷಿಸಿರುತ್ತದೆ;

- ದೂರುದಾರಳು ಅಸ್ರಾರ್ ಅಹಮದ್ ಎಂಬುವವನೊಂದಿಗೆ ಮೂರನೇ ಭಾರಿ ವಿವಾಹವಾಗಿದ್ದು, ಆತನನ್ನು ವಿವಾಹವಾದ ಬಳಿಕ ಒಂದು ಮಗುವಿಗೆ ಜನ್ಮವಿತ್ತಿರುತ್ತಾಳೆ.

- ದೂರುದಾರಳು ಮೈಸೂರಿನ IVನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದಲ್ಲಿನ ಕ್ರಿಮಿನಲ್ ಅಪೀಲು ಸಂಖ್ಯೆ: 256/2016ರಲ್ಲಿನ ಸಿ.ಎಂಐಎಸ್.ಸಂಖ್ಯೆ: 69/2012ರಲ್ಲಿ ಜಾರಿಮಾಡಿದ 5ನೇ ಡಿಸೆಂಬರ್ 2016ರ ಆದೇಶವನ್ನು ಪ್ರಶ್ನಿಸಿರುತ್ತಾಳೆ. ಮಾನ್ಯ ಅಪೀಲು ನ್ಯಾಯಾಧೀಶರು, 16ನೇ ಸೆಪ್ಟೆಂಬರ್ 2017ರಂದು ವೆಚ್ಚಗಳೊಂದಿಗೆ ಸದರಿ ಅಪೀಲನ್ನು ವಜಾಗೊಳಿಸುವಾಗ, ದೂರುದಾರಳು (ಪಿ.ಡಬ್ಲ್ಯೂ.1) 27ನೇ ಏಪ್ರಿಲ್ 2012 ರಂದು ಅರ್ಜಿ ಸಲ್ಲಿಸಿರುವ ದಿನಾಂಕಕ್ಕೆ ಮೂರು ವರ್ಷಗಳ ಮೊದಲು ಅರ್ಜಿದಾರನು ಕುವೈತ್ ಯುಎಇನಲ್ಲಿ ಕಾರ್ಯ ನಿರ್ವಹಿಸುತ್ತಿದ್ದನೆಂದು ಒಪ್ಪಿಕೊಂಡಿರುತ್ತಾಳೆಂಬ ಅಂಶವನ್ನು ದಾಖಲಿಸಿರುತ್ತಾರೆ. ಅಲ್ಲದೆ, ದೂರುದಾರಳ ಪ್ರಮಾಣದ ಹೇಳಿಕೆ (ನಿಶಾನೆ ಪಿ.112)ಯ ಪ್ರಕಾರ ಅರ್ಜಿದಾರನೊಂದಿಗೆ ಆಕೆಯ ಸಂಬಂಧ 3ನೇ ಆಗಸ್ಟ್ 2011ರಂದು ಕೊನೆಯಾಗಿರುತ್ತದೆಂಬುದೂ ದಾಖಲಿಸಿರುತ್ತಾರೆ.

- ಆಗಸ್ಟ್ 2011ರಲ್ಲಿಂಯೇ ದೂರುದಾರಳೊಂದಿಗಿನ ಸಂಬಂಧ ಕೊನೆಗೊಂಡಿದ್ದಾಗ್ಯೂ, ದೂರುದಾರಳು ದುರ್ಭಾವನೆಯಿಂದ ಸುಳ್ಳು ದೂರನ್ನು ದಾಖಲಿಸಿರುವ ಮೂಲಕ ಆರು ಆಪಾದಿತರ ವಿರುದ್ಧ ಭಾರತ ದಂಡ ಸಂಹಿತೆ 498ಎ ಹಾಗೂ 506ರ ಅಡಿಯಲ್ಲಿನ ಅಪರಾಧಗಳು ನಡೆದಿವೆಯೆಂದು ಆಪಾದಿಸಿ 7ನೇ ಏಪ್ರಿಲ್ 2012ರಂದು ಪ್ರಥಮ ಮಾಹಿತಿ ವರದಿ ಸಂಖ್ಯೆ: 22/2012ನ್ನು ದಾಖಲಿಸಿರುತ್ತಾಳೆ. ತನಿಖೆಯ ತರುವಾಯ ಪೊಲೀಸರು ಅರ್ಜಿದಾರನ ವಿರುದ್ಧ ಮಾತ್ರ ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರನು, ಮೇಲೆ ನಿರೂಪಿಸಿದ ಅಂಶಗಳ ಕ್ರಮಣಿಕೆಯ ಹಿನ್ನೆಲೆಯಲ್ಲಿ, ಇಡೀ ದೂರಿನ ಪ್ರತಿಪಾದನೆಗಳು ಸುಳ್ಳಿನಿಂದ ಕೂಡಿವೆಯೆಂದು ಖುದ್ದಾಗಿ ವಾದಿಸಿ, ತದನುಸಾರವಾಗಿ, ಈ ಅರ್ಜಿಯನ್ನು ಅಂಗೀಕರಿಸಲು ಕೋರಿರುತ್ತಾರೆ.

7. ಅರ್ಜಿಯ ವಾದವನ್ನು ವಿರೋದಿಸುತ್ತಾ, ದೂರುದಾರರ ಪರ ಮಾನ್ಯ ವಕೀಲರಾದ ಶ್ರೀ ಹೆಗಡೆ ಹುಡ್ಲಮನೆ – ಇವರು ದೂರು ಅರ್ಜಿದಾರ ಹಾಗೂ ಇತರರ ವಿರುದ್ಧದ ನಿರ್ದಿಷ್ಟ ಅತಿಯಾದ ಆರೋಪಗಳನ್ನು ಒಳಗೊಂಡಿರುತ್ತದೆಂದು ವಾದಿಸಿರುತ್ತಾರೆ. ಆದಾಗ್ಯೂ, ಪೊಲೀಸರು, ಅರ್ಜಿದಾರನ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿದ್ದು, ಇದು ಅರ್ಜಿದಾರನು ದೂರುದಾರಳಿಗೆ ಕಿರುಕುಳ ನೀಡಿರುತ್ತಾನೆಂದು ಮೇಲ್ನೋಟಕ್ಕೆ ಸಾಬೀತುಪಡಿಸುತ್ತದೆ. ಅರ್ಜಿದಾರ ಹಾಗೂ ದೂರುದಾರಳ ನಡುವೆ ನಡೆದಿರುವ ವಿವಾಹದ ಬಗೆಗೆ ಯಾವುದೇ ವಿವಾದವಿರುವುದಿಲ್ಲವೆಂದೂ ವಾದಿಸಿರುತ್ತಾರೆ. ಅರ್ಜಿದಾರನು ವಾದಿಸಿರುವ ಎಲ್ಲಾ ವಾದಗಳು ಪುರಾವೆಗೆ ಒಳಪಟ್ಟಿರುತ್ತವೆ. ಆದ್ದರಿಂದ ಅಧಿವಿಚಾರಣೆ ನಡೆಸುವುದು ಅವಶ್ಯಕವಾಗಿರುತ್ತದೆ. ತದನುಸಾರವಾಗಿ, ಈತ ಈ ಅರ್ಜಿಯನ್ನು ವಜಾ ಮಾಡಲು ಕೋರಿರುತ್ತಾರೆ.

8. ಮಾನ್ಯ ಹೆಚ್.ಸಿ.ಜಿ.ಪಿ. ಯವರೂ ಸಹ ಅರ್ಜಿಯ ವಾದವನ್ನು ವಿರೋಧಿಸಿ ವಾದಿಸಿರುತ್ತಾರೆ.

9. ನಾನು ಅತ್ಯಂತ ಜಾಗರೂಕತೆಯಿಂದ ಪ್ರತ್ಯರ್ಜಿದಾರರ ವಿವಾದಗಳನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ.

10. ಪ್ರಕರಣದ ವಿವಾದಾತೀತ ಅಂಶಗಳೆಂದರೆ, ಅರ್ಜಿದಾರನು ಜುಲೈ 2008ರಲ್ಲಿ ದೂರುದಾರಳನ್ನು ವಿವಾಹವಾಗಿರುತ್ತಾನೆ. ಅರ್ಜಿದಾರನೊಂದಿಗೆ ಅವಳ ವಿವಾಹವಾದ ತರುವಾಯ ಕೂಡ, ದೂರುದಾರಳು ಆಕೆಯ ಮೊದಲ ಪತಿ ಆಸೀಫ್ ಫಾರೂಕ್ ಸಲ್ಲಿಸಿದ್ದ ದಾಂಪತ್ಯ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಗಾಗಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸಮರ್ಥಿಸಿಕೊಂಡಿರುತ್ತಾಳೆ. ಕಿಮಿನಲ್ ಅಪೀಲು ಸಂಖ್ಯೆ: 256/ 2016ರಲ್ಲಿನ ಮಾನ್ಯ ಸೆಷೆನ್ಸ್ ನ್ಯಾಯಾಧೀಶರ ಆದೇಶದ 14ನೇ ಪ್ಯಾರಾದಲ್ಲಿ ಅವರು ದಾಖಲಿಸಿರುವ ಆಕೆ ಸ್ವಂತ ಒಪ್ಪಿಗೆಯ ಪ್ರಕಾರ ಆಕೆಯ ವಿವಾಹವಾದ ತರುವಾಯ ಮೂರು ವರ್ಷಗಳೊಳಗೆ ಅರ್ಜಿದಾರನೊಂದಿಗಿನ ಆಕೆಯ ಸಂಬಂಧ ಆಗಸ್ಟ್ 2011ರಲ್ಲಿ ಕೊನೆಗೊಂಡಿರುತ್ತದೆ. ದೂರುದಾರಳು ಅಸ್ರಾರ್ ಅಹಮದ್ ಎಂಬುವವನೊಂದಿಗೆ ಮೂರನೇ ಮದುವೆಯ ಕರಾರು ಮಾಡಿಕೊಂಡು ಅವನಿಂದ ಒಂದು ಮಗುವಿಗೆ ಜನ್ಮವಿತ್ತಿದ್ದಳೆಂಬ ಮತ್ತೊಂದು ನ್ಯಾಯಿಕ ಅಂಶವೂ ಅಲ್ಲಿ ದಾಖಲಾಗಿರುತ್ತದೆ. ಈ ಆದೇಶವು, ದೂರುದಾರಳು ಏಪ್ರಿಲ್ 2012ರಲ್ಲಿ ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, (ಸಂಕ್ಷಿಪ್ತತೆಗಾಗಿ ಕೌ.ದೌ.ಅ. ಎಂದು ಹೆಸರಿಸಲಾಗಿರುತ್ತದೆ) ದಡಿಯಲ್ಲಿ ವ್ಯವಹರಣೆಗಳನ್ನು ಆರಂಭಿಸಿರುತ್ತಾಳೆಂಬುದು ಆದೇಶದಿಂದ ತಿಳಿದು ಬರುತ್ತದೆ. ಅಲ್ಲದೆ ಮಾನ್ಯ ಸೆಷನ್ ನ್ಯಾಯಾಧೀಶರು ದೂರುದಾರಳು ಮೂರನೇ ಭಾರಿ ವಿವಾಹವಾಗಿರುತ್ತಾಳೆಂದು ನಿಶಾನೆ. ಆರ್.7 ರಿಂದ ರುಜುವಾತಾಗಿದೆಯೆಂದು ದಾಖಲಿಸಿ, ಅಂತಿಮವಾಗಿ ಅರ್ಜಿಯನ್ನು ವಜಾಗೊಳಿಸಿರುತ್ತಾರೆ. ಅದರ ಮೇಲೆ ದಾಖಲಾದ ಕ್ರಿಮಿನಲ್ ಅಪೀಲನ್ನು ಸಹ ವೆಚ್ಚಗಳೊಂದಿಗೆ ವಜಾಗೊಳಿಸಲಾಗಿದೆ.

11. ಇದರಿಂದ ತೃಪ್ತಿಯಾಗದೆ, ದೂರುದಾರಳು 2014ರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿ ತನಗೆ ಹಾಗೂ ತನ್ನ ಮಗುವಿಗೆ ಜೀವನಾಂಶವನ್ನು ಕೋರಿ (ಸಿಎಂಐಎಸ್ ಸಂ.526/2014) ವ್ಯವಹರಣೆಗಳನ್ನು

ಆರಂಭಿಸಿರುತ್ತಾಳೆ. ದೂರುದಾರಳ ಕ್ಲೇಮಿಗೆ ಸಂಬಂಧಪಡುವಷ್ಟರಮಟ್ಟಿಗೆ ಸದರಿ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ.

12. ಹೀಗೆ ದೂರುದಾರಳ ಮುಷ್ಠಿಯಲ್ಲಿ ನಲುಗಿದ ಅರ್ಜಿದಾರನೂ ಸಹ ಇತರ ವಿಷಯಗಳೊಂದಿಗೆ ದೂರುದಾರಳು ಆಸಿಫ್ ಅಲಿ ಪಾರೂಕ್ ನೊಂದಿಗೆ ಈ ಮೊದಲು ವಿವಾಹವಾಗಿದ್ದ ವಿಚಾರವನ್ನು ಮರೆಮಾಚಿದ್ದು, ಅದರ ಬಗ್ಗೆ, ಪ್ರಶ್ನಿಸಿದಾಗ ಈಕೆ ತಕ್ಷಣ ದೂರನ್ನು ದಾಖಲಿಸಿರುತ್ತಾಳೆಂದು ಆಪಾದಿಸಿ ಪಿಸಿಆರ್ ಸಂಖ್ಯೆ:1085/2016ರಲ್ಲಿ ಒಂದು ಖಾಸಗಿ ದೂರನ್ನು ಸಲ್ಲಿಸಿರುತ್ತಾನೆ. ಆ ತರುವಾಯ, ಈಕೆ ಮೂರನೇ ಭಾರಿ ವಿವಾಹವಾಗುತ್ತಾಳೆ. ಸದರಿ ಆಪಾದನೆಗಳೊಂದಿಗೆ, ಅರ್ಜಿದಾರಳು, ದೂರುದಾರಳು ಹಾಗೂ ಇತರೆ ಮೂವರ ವಿರುದ್ಧ ಭಾರತ ದಂಡ ಸಂಹಿತೆಯ 34ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 120ಎ, 120ಬಿ, 107, 108, 494, 436ನೇ ಪ್ರಕರಣಗಳಡಿ ದಂಡನೀಯವಾದ ಅಪರಾಧಗಳನ್ನು ಎಸಗಿರುವುದಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಕೋರಿರುತ್ತಾನೆ. ಮಾನ್ಯ ಮ್ಯಾಜಿಸ್ಟ್ರೇಟರು ದಂಡ ಸಂಹಿತೆಯ 156(3) ಪ್ರಕರಣದಡಿಯಲ್ಲಿ ಪ್ರಕರಣವನ್ನು ತನಿಖೆಗೆ ಉಲ್ಲೇಖಿಸಿರುತ್ತಾರೆ. ತದನುಸಾರವಾಗಿ, ಪ್ರಥಮ ಮಾಹಿತಿ ವರದಿ ಸಂಖ್ಯೆ: 149/2016ನ್ನು ಮೈಸೂರು ನಗರದ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ 11ನೇ ಆಗಸ್ಟ್ 2016ರಂದು ದಾಖಲಿಸಲಾಗಿರುತ್ತದೆ. ದೂರುದಾರಳು ಹಾಗೂ ಇತರೆ ಆಪಾದಿತರು ಕ್ರಿಮಿನಲ್ ಅರ್ಜಿ ಸಂಖ್ಯೆ: 1182/2017ರಲ್ಲಿ ಈ ನ್ಯಾಯಾಲಯದ ಮುಂದೆ ಸದರಿ ಪ್ರಥಮ ಮಾಹಿತಿ ವರದಿಯನ್ನು ನಿರರ್ಥಕವಾಗಿ ಪ್ರಶ್ನಿಸಿರುತ್ತಾರೆಂಬ ಇನ್ನಷ್ಟು ಸಂಗತಿಗಳು ದಾಖಲೆಗಳಿಂದ ತಿಳಿದುಬಂದಿರುತ್ತದೆ.

13. ಖುಲಾಸೆ ಮಾಡುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿದಾರನ ಅರ್ಜಿಯನ್ನು ಘಟನೆಯ ದಿನಾಂಕದಂದು ಆರೋಪಿಗಳ ಉಪಸ್ಥಿತಿ ಮತ್ತು ವಿವಾಹವು ಸಿಂಧುವಾದುದೇ ಎಂಬುದನ್ನು ವಿಲೆಯ ಹಂತದಲ್ಲಿ ಪರಿಗಣಿಸುವಂತಿಲ್ಲವೆಂದು ದಾಖಲಿಸುವ ಮೂಲಕ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವಜಾಗೊಳಿಸಿರುತ್ತಾರೆ.

14. ಅರ್ಜಿದಾರರು ನಿರೂಪಿಸಿದ ವಾಸ್ತವಾಂಶಗಳ ಸಾರಾಂಶ ಹಾಗೂ ದಾಖಲೆಗಳಿಂದ ತಿಳಿದುಬಂದಂಥ ವಿವಾದಾತೀತ ವಾಸ್ತವಾಂಶಗಳು. ಭಾರತ ದಂಡ ಸಂಹಿತೆಯ 498ಎ ಪ್ರಕರಣದಡಿಯಲ್ಲಿನ ಅಪರಾಧ ಎಸಗಿರುವುದನ್ನು ಆಪಾದಿಸಿ ದೂರನ್ನು ದಾಖಲಿಸಿದಾಗ್ಯೂ ಸಹ, ವಾಸ್ತವವಾಗಿ ಅರ್ಜಿದಾರನು ದೂರುದಾರಳ ಮುಷ್ಠಿಯಲ್ಲಿ ಹೇಳಿಕೊಳ್ಳಲಾಗದಂತಹ ಸಂಕಟವನ್ನು ಅನುಭವಿಸುತ್ತಿದ್ದಾನೆಂಬ ತಾರ್ಕಿಕ ತೀರ್ಮಾನಕ್ಕೆ ಬರುವಂತೆ ಮಾಡುತ್ತದೆ.

15. ಹಿಂದಿನ ಅಸ್ತಿತ್ವದಲ್ಲಿರುವ ವಿವಾಹದ ವಿಷಯವು ಬಹಿರಂಗವಾದಾಗ ಪತಿಗೆ ಅಪಾರ ಮಾನಸಿಕ ನೋವು ಮತ್ತು ಸಂಕಟ ಉಂಟಾಗುತ್ತದೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ.

16. ದೂರುದಾರಳು, ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗದಿದ್ದಾಗ್ಯೂ ಅರ್ಜಿದಾರನನ್ನು ಅವ್ಯಾಹತವಾಗಿ ಹಲವಾರು ನ್ಯಾಯಾಲಯಗಳಿಗೆ ಅಲೆಸಿದ್ದಾಳೆ. ಇದು ದೂರುದಾರಳು ದಂಡ ಪ್ರಕ್ರಿಯೆಯ 125ನೇ ಪ್ರಕರಣದಡಿಯಲ್ಲಿನ ವ್ಯವಹರಣೆಗಳನ್ನು ಅನುಸರಿಸಿ ಕೌಟುಂಬಿಕ ದೌರ್ಜನ್ಯ ಅಧಿನಿಯಮದ ಉಪಬಂಧಗಳಡಿಯಲ್ಲಿನ ವ್ಯವಹರಣೆಗಳನ್ನು ಆರಂಭಿಸಿರುವುದರೊಂದಿಗೆ ಪ್ರಾರಂಭವಾಯಿತು. ದೂರುದಾರಳ ನಡತೆಗೆ ಸಂಬಂಧಿಸಿದಂತೆ ಎರಡೂ ವ್ಯವಹರಣೆಗಳಲ್ಲಿ ಮಾನ್ಯ ಅಧಿವಿಚಾರಣಾ ಮ್ಯಾಜಿಸ್ಟ್ರೇಟರರು ನ್ಯಾಯಿಕ ಚಲನ್‌ಗಳನ್ನು ದಾಖಲಿಸಿರುತ್ತಾರೆ. ಕೌಟುಂಬಿಕ ದೌರ್ಜನ್ಯ ತಡೆ ಅಧಿನಿಯಮದಡಿಯಲ್ಲಿ ನ್ಯಾಯನಿರ್ಣಯಿಸಿದ ವ್ಯವಹರಣಗಳನ್ನು ನ್ಯಾಯನಿರ್ಣಯ ಮಾಡಿದ ಮಾನ್ಯ ಮ್ಯಾಜಿಸ್ಟ್ರೇಟರು ನಿಶಾನೆ ಆರ್.7ರ ಪ್ರಕಾರ ದೂರುದಾರಳ ವಿವಾಹವು ಆಕೆಯ ಮೂರನೇ ಪತಿಯೊಂದಿಗೆ ಆಗಿತ್ತೆಂಬುದು ರುಜುವಾತಾಗಿರುತ್ತದೆಂಬುದನ್ನು ದಾಖಲಿಸಿರುತ್ತಾರೆ. ಮಾನ್ಯ ಸೆಷನ್ಸ್ ನ್ಯಾಯಾಧೀಶರು ಅಪೀಲನ್ನು ವಜಾಗೊಳಿಸುವಾಗ ಈ ನಿರ್ಣಯವನ್ನು ದೃಢೀಕರಿಸಿರುತ್ತಾರೆ.

17. ದೂರುದಾರಳು ಅರ್ಜಿದಾರನೊಂದಿಗೆ ವಿವಾಹವಾದಾಗ ಆಕೆಯ ಮೊದಲ ಪತಿ ಆರಂಭಿಸಿದ್ದ ದಾಂಪತ್ಯ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಗಾಗಿ ಕೋರಿದ್ದ

ವೈವಾಹಿಕ ಪ್ರಕರಣದಲ್ಲಿ ಈಕೆ ಪ್ರತ್ಯರ್ಜಿದಾರಳಾಗಿದ್ದಳೆಂಬುದನ್ನು ದಾಖಲೆಗಳು ನಿಸ್ಸಂಶಯವಾಗಿ ಬಹಿರಂಗಪಡಿಸಿರುತ್ತವೆಂಬುದನ್ನು ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿನ ವ್ಯವಹರಣೆಗಳಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ವ್ಯವಹರಣೆಗಳಲ್ಲಿ ಈ ವಾಸ್ತವಾಂಶವನ್ನು ಈಕೆ ಒಪ್ಪಿಕೊಂಡಿರುತ್ತಾಳೆ.

18. ಇದು, ದೂರುದಾರಳು, ಅರ್ಜಿದಾರನ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣ ಹಾಗೂ ಭಾರತ ದಂಡ ಸಂಹಿತೆಯ 498ಎ ಪ್ರಕರಣದಡಿಯಲ್ಲಿ ಕ್ರಿಮಿನಲ್ ವ್ಯವಹರಣೆಗಳನ್ನು ಆರಂಭಿಸುವ ಮೂಲಕ ಸದರಿ ಉಪಬಂಧಗಳನ್ನು ದುರುಪಯೋಗಪಡಿಸಿಕೊಂಡಂಥ ಒಂದು ವಿಶಿಷ್ಟ ಪ್ರಕರಣವಾಗಿರುತ್ತದೆ.

19. ದೂರಿನಲ್ಲಿ, ಈ ಮುಂದಿನಂತೆ ಆರೋಪಿಸಲಾಗಿದೆ:

- ಅರ್ಜಿದಾರ, ಆತನ ತಾಯಿ ಹಾಗೂ ಸಹೋದರಿಯರು ದೂರುದಾರಳ ಮೇಲೆ ಹಲ್ಲೆ ಮಾಡಿರುತ್ತಾರೆ;
- ಅರ್ಜಿದಾರ ಹಾಗೂ ಆತನ ಸಹೋದರಿಯರು ಕಾರನ್ನು ಖರೀದಿಸಲು 6,00,000/- ರೂ.ಗಳಿಗೆ ಬೇಡಿಕೆಯಿಟ್ಟು, ಇದಕ್ಕೆ ತಪ್ಪಿದಲ್ಲಿ ಆಕೆಗೆ ವಿಚ್ಛೇದನ ನೀಡುವುದಾಗಿ ಬೆದರಿಕೆ ಒಡ್ಡಿರುತ್ತಾರೆ;
- ಅರ್ಜಿದಾರ ಹಾಗೂ ಆತನ ಕುಟುಂಬದ ಸದಸ್ಯರು ಈಕೆಯನ್ನು 'ಕಾಲ್‌ಗರ್ಲ್' ಎಂದು ಕರೆಯುವ ಮೂಲಕ ಹೀಯಾಳಿಸಿರುತ್ತಾರೆ;
- ಚರಾಸ್ಥಿಯನ್ನು ನೀಡದಿದ್ದಲ್ಲಿ ಸೀಮೆಎಣ್ಣೆ ಸುರಿದು ದೂರುದಾರಳನ್ನು ಕೊಲ್ಲುವುದಾಗಿ ಬೆದರಿಕೆಯೊಡ್ಡಿರುತ್ತಾರೆ;
- ಫೋನಿನಲ್ಲಿ ಆಕೆಯ ಕುಟುಂಬದವರೊಂದಿಗೆ ಮಾತನಾಡಲು ಅವಕಾಶ ನೀಡಿರಲಿಲ್ಲ;

- ದಿನಾಂಕ: 03.08.2011ರಂದು ಆಕೆಯನ್ನು ಅವಳ ಪತಿ ಒಂದು ಕೊಠಡಿಯಲ್ಲಿ ಕೂಡಿಹಾಕಿದ್ದು, ಇತರೆ ಆಪಾದಿತರಾದಂಥ ಫೈಜ಼ಲ್, ಅಂಜುಮ್, ಶೇಜಾನ್ ಬೇಗಂ ಹಾಗೂ ಆಫ್ಜರ್‌ರವರುಗಳು ಆಕೆಯನ್ನು ಅಡುಗೆ ಮನೆಗೆ ಎಳೆದೊಯ್ದು ಆಕೆ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಲು ಪ್ರಯತ್ನಿಸಿರುತ್ತಾರೆ. ಆದಾಗ್ಯೂ, ಆಕೆ ಅವರಿಂದ ತಪ್ಪಿಸಿಕೊಂಡು ಕೊಠಡಿಯ ಒಳಗೆ ಹೋಗಿ ಚಿಲಕ ಹಾಕಿಕೊಂಡಿರುತ್ತಾಳೆ. ತರುವಾಯ ಅಂಜುಮ್ ಈ ಸಾರಿ ನೀನು ತಪ್ಪಿಸಿಕೊಂಡಿರಬಹುದು, ಮುಂದೊಂದು ದಿನ ಬೆಂಕಿಹಚ್ಚುವುದಾಗಿ ಮತ್ತು ಮೈಸೂರಿಗೆ ಕಳುಹಿಸುತ್ತೇವೆ ಎಂದು ಹೇಳಿರುತ್ತಾರೆ;
- ತರುವಾಯ ಫೈಜಲ್ ಆಕೆಯುನ್ನು ಫ್ಯಾನಿಗೆ ನೇಣು ಹಾಕಲು ಪ್ರಯತ್ನಿಸಿರುತ್ತಾನೆ (ಸಿಲೀಂಗ್ ಫ್ಯಾನ್) ಹಾಗೂ ಇದರಿಂದ ಆಕೆಗೆ ಗಾಯಗಳುಂಟಾಗಿರುತ್ತವೆ;
- ಫೈಜಲ್ ಮೋಟಾರು ಸೈಕಲ್‌ನಿಂದ ಈಕೆಯನ್ನು ಬೀಳಿಸಲು ಪ್ರಯತ್ನಿಸಿದ್ದು, ಇದರಿಂದ ಆಕೆಗೆ ಗಾಯಗಳುಂಟಾಗಿದ್ದು, ಆಕೆಯ ತಂದೆ ಮೈಸೂರಿನಲ್ಲಿ ಚಿಕಿತ್ಸೆ ಕೊಡಿಸಿರುತ್ತಾನೆ;
- ದಿನಾಂಕ: 13.03.2012ರಂದು ಆಕೆಯ ಮನೆಯಲ್ಲಿ ಪಂಚಾಯಿತಿ ನಡೆಸಿ, ಆಕೆಯ ತಂದೆ ಹಾಗೂ ದೂರುದಾರಳನ್ನು ನಿಂದಿಸಿ, ಸಾಯಿಸುವುದಾಗಿ ಹೆದರಿಸಿರುತ್ತಾರೆ. ಇದರಿಂದಾಗಿ ಆಕೆಯ ತಂದೆ ಮಾನಸಿಕ ಆಘಾತಕ್ಕೆ ಒಳಗಾಗಿರುತ್ತಾನೆಂದೂ ಆಪಾದಿಸಲಾಗಿರುತ್ತದೆ.

20. ದೂರು, ಮೇಲೆ ದಾಖಲಾದ ಆಪಾದನೆಗಳನ್ನು ಒಳಗೊಂಡಿದ್ದಾಗ್ಯೂ, 03.08.2011 ದಿನಾಂಕಕ್ಕೆ ಸಂಬಂಧಿಸಿದಂತೆ ಅದು ಪ್ರಕ್ಷೇಪವಾಗಿದೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವಾಗಿರುತ್ತದೆ. ಆ ದಿನದಂದು ದೂರುದಾರಳು ತನ್ನನ್ನು ಕೊಠಡಿಯಲ್ಲಿ ಕೂಡಿಹಾಕಿ, ಸೀಮೆಎಣ್ಣೆ ಸುರಿದು ಬೆಂಕಿಹಚ್ಚಿ ನನ್ನನ್ನು

ಕೊಲ್ಲಲು ಪ್ರಯತ್ನಿಸಲಾಯಿತೆಂದು ಆರೋಪಿಸಿರುತ್ತಾಳೆ. ಅಲ್ಲದೆ, ಫೈಜ಼ಲ್ ಸೀಲಿಂಗ್ ಫ್ಯಾನ್‌ಗೆ ನೇಣುಹಾಕಲು ಪ್ರಯತ್ನಿಸಿದನೆಂದೂ ಹೇಳಿರುತ್ತಾಳೆ. ನಂತರದ ವಾಕ್ಯದಲ್ಲಿ ಮೋಟಾರು ಸೈಕಲಿನಿಂದ ಬೀಳಿಸಿ ತನ್ನನ್ನು ಕೊಲ್ಲಲು ಫೈಜಲ್ ಪ್ರಯತ್ನಿಸಿದನೆಂದೂ ಹೇಳಿರುತ್ತಾಳೆ. ಫೈಜಲ್ ದೂರುದಾರಳನ್ನು ನೇಣುಹಾಕಲು ಪ್ರಯತ್ನಿಸಿದನೆಂದೂ, ಆ ತರುವಾಯ ಮೋಟಾರು ಸೈಕಲಿನಿಂದ ಬೀಳಿಸಿದನೆಂದು ಮಾಡಿರುವ ಎರಡು ಆರೋಪಗಳೂ ಪರಸ್ಪರ ವೈರುದ್ಯದಿಂದ ಕೂಡಿರುತ್ತವೆ. ಫೈಜಲ್ ಈಕೆಯನ್ನು ನಿಜವಾಗಿಯೂ ನೇಣುಹಾಕಲು ಪ್ರಯತ್ನಿಸಿದ್ದಲ್ಲಿ ಅವನ ಹಿಡಿತದಿಂದ ಈಕೆ ಹೇಗೆ ತಪ್ಪಿಕೊಂಡಿರುತ್ತಾಳೆ. ಇದಕ್ಕೆ ಸಂಬಂಧಿಸಿದಂತೆ ಮುಂದೆ ಯಾವುದೇ ವಿವರಗಳು ಇರುವುದಿಲ್ಲ. ಆದಾಗ್ಯೂ, ಸದರಿ ಆಪಾದನೆಯನ್ನು ನಿಜವೆಂದು ಭಾವಿಸಬಹುದಾದಲ್ಲಿ ಕೂಡ, ಆ ನಂತರ ಈಕೆ ಫೈಜ಼ಲ್ ಮೋಟಾರು ಸೈಕಲ್ ಮೇಲೆ ಏಕೆ ಕುಳಿತಳು ಎಂಬುದು ಅರ್ಥವಾಗುವುದಿಲ್ಲ.

22. ಹಾಗಾಗಿ, ದೂರು ಸಂಪೂರ್ಣವಾಗಿ ನಂಬಲು ಅನರ್ಹವಾಗಿದ್ದು, ಸ್ವತಃ ವಿರೋದಾಭಾಸಗಳಿಂದ ಕೂಡಿರುತ್ತದೆ, 3,00,000/- ರೂ.ಗಳನ್ನು ತರಲು ಬೇಡಿಕೆ ಇಟ್ಟರೆಂಬ ಮೊದಲ ಆಪಾದನೆಯನ್ನು ಅರ್ಜಿದಾರ ಹಾಗೂ ಆತನ ಕುಟುಂಬದ ಸದಸ್ಯರುಗಳು ಒಟ್ಟಿಗೆ ಮಾಡಿದರೆಂದು ಹೇಳಲಾಗಿದೆ. ಕಾರು ಖರೀದಿಗೆ ಹಣ ತರಬೇಕೆಂಬ ಬೇಡಿಕೆಗೆ ಸಂಬಂಧಿಸಿದ ಎರಡನೇ ಆಪಾದನೆಯನ್ನು ಅರ್ಜಿದಾರ ಹಾಗೂ ಆತನ ಸಹೋದರಿಯರ ವಿರುದ್ಧ ಜಂಟಿಯಾಗಿ ಮಾಡಲಾಗಿರುತ್ತದೆ. ಹಾಗಾಗಿ, ದೂರಿನಲ್ಲಿರುವ ಎಲ್ಲಾ ಆಪಾದನೆಗಳು ಬಹು ಉದ್ದೇಶಿತ ಸ್ವರೂಪದ್ದಾಗಿದ್ದು, ಇತರೆ ಆಪಾದಿತರೊಂದಿಗೆ ಆಪಾದಿಸಲಾಗಿದೆಯೇ ಹೊರತು, ನಿರ್ದಿಷ್ಟವಾಗಿ ಅರ್ಜಿದಾರನೊಬ್ಬನ ವಿರುದ್ಧ ಇರುವುದಿಲ್ಲ.

23. ತನಿಖೆಯ ತರುವಾಯ, ವಾಸ್ತವವಾಗಿ, ಪೊಲೀಸರು ಆಪಾದಿತ ಸಂಖ್ಯೆ:2 ರಿಂದ 6 ರವರೆಗೆ ಎಂದರೆ ಷಹಜಾನ್ ಬೇಗಂ, ಅಫಜಲ್ ಅಹಮದ್ ಖಾನ್, ಪರ್ವೀನ್ ಅಹಮದ್, ಅಂಜುಮ್ ನಜೀರ್ ಹಾಗೂ ಸಿದ್ಧಿಕಿ ಯವರುಗಳ ವಿರುದ್ಧ ಆರೋಪಪಟ್ಟಿಯನ್ನು ಸಲ್ಲಿಸಿರುವುದಿಲ್ಲ. ಪ್ರಾಸಿಕ್ಯೂಷನ್ ಆಗಲೀ ಇಲ್ಲವೇ ದೂರುದಾರಳಾಗಲೀ, ಅರ್ಜಿದಾರನು ಯಾವುದೇ ಆಪಾದಿತ ಕ್ರಿಮಿನಲ್ ಕೃತ್ಯಗಳನ್ನು

ಎಸಗಿರಬಹುದೆಂದು ನಿರೂಪಿಸುವಂಥ ಯಾವುದೇ ಇತರೆ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರನ ವಿರುದ್ಧ ಮಾಡಿರುವ ಆರೋಪಗಳು ಆತನಿಗೆ ಕಿರುಕುಳ ನೀಡುವ ಉದ್ದೇಶದಿಂದಲೇ ಮಾಡಲಾಗಿದೆ ಎಂಬ ತೀರ್ಮಾನಕ್ಕೆ ನಿಸ್ಸಂಶಯವಾಗಿ ಬರಬಹುದಾಗಿರುತ್ತದೆ.

24. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಈ ಅರ್ಜಿಯು ಪರಿಗಣನೆಗೆ ಅರ್ಹವಾಗಿದ್ದು, ಅಂಗೀಕರಿಸಲು ಯುಕ್ತವಾದುದಾಗಿರುತ್ತದೆ. ಹಾಗಾಗಿ, ಈ ಮುಂದಿನಂತೆ ಆದೇಶಿಸಲಾಗಿರುತ್ತದೆ:

**ಆದೇಶ**

ಎ) ಅರ್ಜಿಯನ್ನು ***ಅಂಗೀಕರಿಸಲಾಗಿರುತ್ತದೆ.***

ಬಿ) ಮೈಸೂರಿನ IVನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿಯ ಕಡತದ ಮೇಲೆ ಇತ್ಯರ್ಥದಲ್ಲಿರುವ ಅಪರಾಧ ಸಂಖ್ಯೆ: 22/2012ರಿಂದ ಉದ್ಭವಿಸಿದ ಸಿ.ಸಿ.ಸಂಖ್ಯೆ:923/2012ರಲ್ಲಿನ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸಲಾಗಿರುತ್ತದೆ.

ಸಿ) ಎರಡನೇ ಪ್ರತ್ಯರ್ಜಿದಾರನು ಅರ್ಜಿದಾರನಿಗೆ 25,000/– (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ರೂ.ಗಳ ವೆಚ್ಚವನ್ನು ಸಂದಾಯ ಮಾಡಲು ನಿರ್ದೇಶಿಸಲಾಗಿರುತ್ತದೆ.

25. ಈ ಅರ್ಜಿಯ ವಿಲೆಯ ಹಿನ್ನೆಲೆಯಲ್ಲಿ, ಐ.ಎ. ಸಂಖ್ಯೆ: 3/2019 ಪರಿಗಣನೆಗೆ ಊರ್ಜಿತವಾಗಿರುವುದಿಲ್ಲ ಹಾಗೂ ಅದನ್ನು ವಿಲೆ ಮಾಡಲಾಗಿರುತ್ತದೆ.